ಕಾಲಿಟ್ಟದ್ದು. ಅಷ್ಟೇನೂ ಎತ್ತರವಲ್ಲದ, ಗುಂಡಗಿನ ದೇಹದ, ಬೆಳ್ಳಗಿನ ಹುಡುಗಿ. ನೀಳಜಡೆ. ಮೌನಗೌರಿ. ತನಗೆ ಅವಳು ಇಷ್ಟವಾದದ್ದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಅವಳ ಎರಡು ಕಣ್ಣುಗಳೇ ಸಾಕು ಅವನ ಸಮಸ್ತವನ್ನೂ ಹೀರಿಬಿಡುತ್ತಿತ್ತು. ಅಗಲವಾದ ತಾವರೆ ದಳದಂತಹ ಕಣ್ಣುಗಳು. ಅದರಲ್ಲಿ ಅಡಗಿದ್ದ ಭಾವನೆಗಳನ್ನು ಅಂದು ಹೇಗೆ ಊಹಿಸಿಕೊಳ್ಳಲು ಸಾಧ್ಯ. ಆ ಕಣ್ಣುಗಳು ಅವನನ್ನು ಎಡೆಬಿಡದೆ ಸಂಗಾತಿಯಂತೆ ಇದ್ದುಬಿಟ್ಟವು. ಈಗಲೂ ಅಷ್ಟೆ, ಕೋಪಕ್ಕೆ ಕಣ್ಣರಳಿಸಿದರೂ ಸಾಂತ್ವನಕ್ಕೆ ಕಣ್ಣು ಕುಗ್ಗಿಸಿದರೂ ತೀಕ್ಷ್ಣತೆಗೆ ಕಣ್ಣು ಕಿರಿದಾಗಿಸಿದರೂ... ಅದರೊಳಗೆ ಹೇಳಲಾರದ ಭಾವವೊಂದು ತಟ್ಟುವುದು ಮಾತ್ರ ನಿಜ. ಮದುವೆ ನಿಶ್ಚಯ ಆದನಂತರವೂ ಏನೊಂದೂ ಮಾತನಾಡದ ಅವಳನ್ನು ತಾನಾಗೆ ಬಲವಂತವಾಗಿ ಕರೆದು ಕೂರಿಸಿಕೊಂಡು ಮಾತನಾಡಿಸಿದ್ದ. 'ಏನಾದರೂ ಹೇಳು?' ಎಂದು ತಾನೇ ಕೇಳಿದಾಗ 'ಏನು ಹೇಳಲಿ?' ಎನ್ನುವಂತೆ ಮೂಕಿಯಾಗಿದ್ದಳು. ಕೊನೆಗೆ ಅವನಾಗೇ 'ನನ್ನ ಕಂಡರೆ ನಿನಗೆ ಇಷ್ಟವೇ?' ಎಂದಾಗ... ಅದೇ ದೊಡ್ಡ ಕಣ್ಣುಗಳನ್ನರಳಿಸಿ ತನ್ನತ್ತ ನೋಡಿದ್ದಳು. ಮುಖದಲ್ಲಿ ಒಂದು ರೀತಿಯ ಮಂದಹಾಸ. ಆ ನೋಟದಲ್ಲಿ ನಾನು ಮುಳುಗುವ ಮೊದಲೇ 'ನೀವಾದರೇನು, ಯಾರಾದರೇನು... ಮದುವೆ ಆಗಲೇ ಬೇಕಲ್ಲವೇ?' ಎಂದು ಓಡಿಹೋಗಿದ್ದಳು. ಅದೇನು ಉತ್ತರವೋ ಅಥವಾ ಅವನಿಗೆ ನೀಡಿದ ತಿಳಿವಳಿಕೆಯೋ... ಇಂದಿನವರೆಗೂ ಅವನಿಗೆ ತಿಳಿದಿಲ್ಲ.

ಬಸ್ಸು ಗಕ್ಕೆಂದು ನಿಂತು ಬ್ರೇಕ್ ಹಾಕಿದ ಡ್ರೈವರ್ ಯಾರನ್ನೋ ಕೆಟ್ಟ ಶಬ್ದದಿಂದ ಬೈದ. ಈಗ ಸುಮತಿ ಇದ್ದಿದ್ದರೆ ಏನು ಮಾಡಿರುತ್ತಿದ್ದಳು... ಅದನ್ನು ನೆನೆದೇ ಮತ್ತೆ ಅವನಿಗೆ ಒಳಗೇ ನಗು ಬಂತು. ಮದುವೆಯಾದ ಹೊಸತರಲ್ಲಿ ಒಂದು ಸಲ ನೆಂಟರ ಮನೆಗೆ ಅವನ ಪರಿಚಯದ ಆಟೋರಿಕ್ಷದಲ್ಲಿ ಹೋಗುತ್ತಿದ್ದಾಗ ಹೀಗೇ ರಸ್ತೆಯಲ್ಲಿ ಅಡ್ಡ ಬಂದ ಸೈಕಲ್ ಓಡಿಸುತ್ತಿದ್ದ ಚಿಕ್ಕ ಹುಡುಗನಿಂದ ತಪ್ಪಿಸಿಕೊಳ್ಳಲು ಆಟೊ ಬ್ರೇಕ್ ಹಾಕಿದ ತಕ್ಷಣ ಅವಳು ಹಿಡಿತ ತಪ್ಪಿ ಅವನ ಮೇಲೆ ಒರಗಿ ಬಿಗಿಯಾಗಿ ಹಿಡಿದಿದ್ದಳು. ಆಟೊದವನು ಆ ಸವಾರನನ್ನು ಬೈದು ನಂತರ ಗಾಡಿ ಚಾಲೂ ಮಾಡಿ 'ಸಾರಿ ಸರ್' ಎಂದು ತನಗೆ ಹೇಳಿದ್ದ. ಇವಳು 'ಅಲ್ಲಪ್ಪ... ಅವನು ಹುಡುಗ. ನಾವು ತಾನೇ ನೋಡಿಕೊಂಡು ಹೋಗಬೇಕು' ಅಂದಿದ್ದಳು. 'ಏನೋ ಹೆಚ್ಚು ಕಮ್ಮಿ ಆಗಿದ್ರೆ ತಲೆಗೇ ಬರುತ್ತಲ್ಲ' ಅಂದಿದ್ದ ಅವನು ಒರಟಾಗಿ. 'ಅದಕ್ಕೆ ನಾನು ಹೇಳಿದ್ದು. ನಾವೇ ನೋಡಿಕೊಂಡು ಹೋಗಬೇಕು ಅಂತ. ದೊಡ್ಡವರು ನಿಮಗೇ ತಿಳಿಯದ್ದು ಆ ಹುಡುಗನಿಗೇನು ತಿಳಿಯುತ್ತೆ' ಅಂದಿದ್ದಳು. ಅವನು ಸುಮ್ಮನಾದರೂ ಇವಳು ಸುಮ್ಮನಿರದೇ 'ಅದೇನು ಕೆಟ್ಟ ಬೈಗುಳ. ಹಾಗೂ ಹೇಳೋದಾದ್ರೆ ಒಳ್ಳೇ ಮಾತ್ನಲ್ಲಿ ಹೇಳಬೇಕು ತಾನೆ!' ಅಂದಿದ್ದಳು. ಸುಂದರಂ ತಾನೇ ನಡುವೆ ಪ್ರವೇಶಿಸಿ 'ಇರಲಿ ಬಿಡಪ್ಪ. ಅಂತು ದೇವರು ದೊಡ್ಡವನು' ಅಂದಾಗ ಇವಳು ಅವನನ್ನೇ ಕೆಕ್ಕರಿಸಿ ನೋಡಿದ್ದಳು. ಆ ಕಣ್ಣುಗಳು ಹೇಳಿದ್ದು ಏನೋ... ಅವನಿಗೆ ತಿಳಿದದ್ದು ಏನೋ!!

ಸ್ಟಾಪ್‌ನಲ್ಲಿ ಇಳಿದು ಮನೆಯ ತಿರುವಿನಲ್ಲಿ ತಿರುಗಿಕೊಂಡು ನಡೆದ. ಮನೆಯ ಹತ್ತಿರ ಬರುತ್ತಿರುವಾಗಲೇ ತಂಬೂರಿಯ ನಾದದೊಂದಿಗೆ ಸುಶ್ರಾವ್ಯವಾಗಿ 'ಶ್ರೀಗಂಧ ನಾನಾಗೆ ಹುಟ್ಟುತ್ತಿದ್ದಿರೆ ಆಗ ನಿನ್ನ ಪಾದಾರ್ಚನೆಗೆ ಸವೆಯುತ್ತಿದ್ದೇ...' ಹಾಡು ಕೇಳಿಬರುತ್ತಿತ್ತು. ಮನಸ್ಸೆಲ್ಲ ಹಾಯೆನ್ನಿಸಿ ಸದ್ದು ಮಾಡದಂತೆ ಶೂ ಮೆಲ್ಲನೆ ಬಿಚ್ಚಿಟ್ಟು ಒಳಗೆ ನಡೆದರೆ ಕಂಡಿದ್ದು ಇವಳೇ. 'ಎಲಾ ಇವಳಾ... ಮದುವೆಯಾಗಿ ಇಪ್ಪತ್ನಾಲ್ಕು ವರುಷವಾಗಿದೆ. ಒಂದು ದಿನಾನೂ ನನ್ನ ಮುಂದೆ ಹಾಡದೇ ಇವತ್ತು ಇದ್ದಕ್ಕಿದ್ದಂತೆ ಹೀಗೆ ಹಾಡು ಕೇಳಿಸುತ್ತಿದ್ದಾಳಲ್ಲ...' ಅಂದುಕೊಳ್ಳುತ್ತಾ ಇರುವಂತೆಯೇ, ಅವಳು ಗಡಬಡಿಸಿ 'ಇದೇನು ಇಷ್ಟು ಬೇಗ' ಎನ್ನುತ್ತಾ ತಂಬೂರಿಯನ್ನು ಎತ್ತಿಟ್ಟು